ತುಮಕೂರು ವಿಶ್ವವಿದ್ಯಾನಿಲಯ
ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು,
ಬಿ.ಹೆಚ್. ರಸ್ತೆ, ತುಮಕೂರು. 572103 ದೂ.ಸಂ: 0816-2260220

ಸಂಖ್ಯೆ:ವಿವಿಕಾತು:2025-26/251 ದಿನಾಂಕ:18.08.2025

# ದರಪಟ್ಟಿ ಆಹ್ವಾನ

**ವಿಷಯ: ತುಮಕೂರು ವಿಶ್ವವಿದ್ಯಾನಿಲಯದ ವಿಜ್ಞಾನ ಕಾಲೇಜಿನ ಆವರಣದಲ್ಲಿರುವ ಜೆರಾಕ್ಸ್ & ಸೈಬರ್ ಸೆಂಟರ್ ಕಟ್ಟಡವನ್ನು ಬಾಡಿಗೆ ಆಧಾರದಲ್ಲಿ ನಡೆಸಲು ದರಪಟ್ಟಿ ಆಹ್ವಾನಿಸಿರುವ ಬಗ್ಗೆ.**

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ಆವರಣದಲ್ಲಿರುವ ಜೆರಾಕ್ಸ್ ಮತ್ತು ಸೈಬರ್ ಸೆಂಟರ್ ಕಟ್ಟಡವನ್ನು ಬಾಡಿಗೆ ಆಧಾರದಲ್ಲಿ ನಡೆಸಲು ದರಪಟ್ಟಿ ಆಹ್ವಾನಿಸಲಾಗಿದೆ. ಜೆರಾಕ್ಸ್ ಮತ್ತು ಸೈಬರ್ ಸೆಂಟರ್‌ನ ಸೇವೆಯನ್ನು ಒದಗಿಸುವ ಸೇವಾದಾತರಿಗೆ ಪ್ರಾಸ್ತಾವಿಕ ದರಪಟ್ಟಿಯನ್ನು ಅನುಬಂಧ -01 ರಲ್ಲಿ ಹಾಗೂ ಷರತ್ತು ಮತ್ತು ನಿಯಮಗಳನ್ನು (Terms & Conditions) ಅನುಬಂಧ -02ರಲ್ಲಿ ನೀಡಲಾಗಿದೆ. ಸದರಿ ದರಪಟ್ಟಿ (Price list) ಹಾಗೂ ಷರತ್ತು ಮತ್ತು ನಿಯಮಗಳನ್ನು ಒಪ್ಪಿ ಜೆರಾಕ್ಸ್ ಮತ್ತು ಸೈಬರ್ ಸೆಂಟರ್ ಕಟ್ಟಡವನ್ನು ನಡೆಸಲು ಇಚ್ಛೆಯುಳ್ಳವರು ದಿನಾಂಕ:25.08.2025 ರ ಸಂಜೆ 4.00 ಗಂಟೆಯೊಳಗಾಗಿ ಗರಿಷ್ಠ ಮಾಸಿಕ ಬಾಡಿಗೆಯ ಮಾಹಿತಿಯೊಂದಿಗೆ ದರಪಟ್ಟಿಗಳನ್ನು ಪ್ರಾಂಶುಪಾಲರು ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್ ರಸ್ತೆ, ತುಮಕೂರು-572103 ಇವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ತಲುಪಿಸಬಹುದು. ದರಪಟ್ಟಿಗಳನ್ನು ದಿನಾಂಕ:26.08.2025 ರಂದು ಬೆಳಗ್ಗೆ 11.30 ಗಂಟೆಗೆ ತೆರೆಯಲಾಗುವುದು. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೇ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ವಿವರಗಳಿಗಾಗಿ ಅಥವಾ ಮಾಹಿತಿಗೆ ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರನ್ನು ಸಂಪರ್ಕಿಸಬಹುದು ಮೊ.-9901261940.

S. Sreenivasa
ಪ್ರಾಂಶುಪಾಲರು
ಪ್ರಾಂಶುಪಾಲರು,
ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು
ತುಮಕೂರು-572103

**ಪ್ರತಿಗಳು:**

1. ಸೂಚನಾ ಫಲಕ, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು.
2. ಶ್ರೀ. ಹರೀಶ್ ಕುಮಾರ್ ಕೆ, ಸಂಯೋಜಕರು, ವೆಬ್ ಸೈಟ್ ಸಮಿತಿ, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು- ವಿಜ್ಞಾನ ಕಾಲೇಜಿನ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಸೂಚಿಸಿದೆ.
3. ಕಚೇರಿ ಪ್ರತಿ.

ಅನುಬಂಧ-01


# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು,

ಬಿ.ಹೆಚ್. ರಸ್ತೆ, ತುಮಕೂರು.572103 ದೂ.ಸಂ: 0816-2260220


ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ಆವರಣದಲ್ಲಿರುವ ಜೆರಾಕ್ಸ್ ಮತ್ತು ಸೈಬರ್ ಸೆಂಟರ್‌ಗೆ ನಿಗಧಿಪಡಿಸಲಾಗುವ ಪ್ರಾಸ್ತಾವಿಕ ದರಗಳ ಪಟ್ಟಿ

| Sl. No | Service | Amount in Rupees |
|---|---|---|
| 1 | Xerox per side (Black & White) | Rs.1.00 |
| 2 | Xerox two side (Black & White) | Rs.1.50 |
| 3 | Bulk Xerox Two (Black & White) (Minimum 100 pages)-per page | Rs.1.20 |
| 4 | Print out-per page | Rs.1.00 |
| 5 | Bulk Print Out –per page | 075p |
| 6 | Color Print-per page | Rs.10.00 |
| 7 | Forms –per page | Rs.1.00 |
| 8 | Spiral Binding | Rs.25.50 |
| 9 | Hard Binding | Prices as per the pages |
| 10 | Practical Records | Prices as per the pages |
| 11 | Blue Books | Prices as per the pages |
| 12 | Online Applications Service Fee | Rs 80.00 |

S. Srinivasa 18/8

ಪ್ರಾಂಶುಪಾಲರು
ಪ್ರಾಂಶುಪಾಲರು,
ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು
ತುಮಕೂರು-572103.

Annexure-02

## ಜೆರಾಕ್ಸ್ ಮತ್ತು ಸೈಬರ್ ಸೆಂಟರ್‌ನಡೆಸಲಿಚ್ಛಿಸುವವರಿಗೆ ಷರತ್ತು / ನಿಯಮಗಳು

- ತುಮಕೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ವಿ.ವಿ.ಯ ಘಟಕ ಕಾಲೇಜಾದ ವಿಜ್ಞಾನ ಕಾಲೇಜಿನ ಜೆರಾಕ್ಸ್‌ಮತ್ತು ಸೈಬರ್ ಸೆಂಟರ್ ಕಟ್ಟಡವನ್ನುಗುತ್ತಿಗೆ ಆಧಾರದ ಮೇಲೆ ನಡೆಸಲು ಅವಕಾಶವಿರುತ್ತದೆ
- ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ಜೆರಾಕ್ಸ್ ಮತ್ತು ಸೈಬರ್ ಸೆಂಟರ್ ಕಟ್ಟಡವನ್ನುಸಮಿತಿಯು ನೀಡುವ ಶಿಫಾರಸ್ಸನ್ನು ಚಾಚೂ ತಪ್ಪದೆ ಅನುಸರಿಸಬೇಕು. ಮೇಲ್ವಿಚಾರಣಾ ಸಮಿತಿಯು ಜೆರಾಕ್ಸ್ ಮತ್ತು ಸೈಬರ್ ಸೆಂಟರ್‌ನಲ್ಲಿ ಒದಗಿಸುವ ಸೇವೆಗಳ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿ ಶಿಫಾರಸ್ಸು ಮಾಡಿದರೆ ಜೆರಾಕ್ಸ್ ಮತ್ತು ಸೈಬರ್ ಸೆಂಟರ್‌ನ ಟೆಂಡರನ್ನು ರದ್ದುಗೊಳಿಸಲಾಗುತ್ತದೆ.
- ಜೆರಾಕ್ಸ್ ಮತ್ತು ಸೈಬರ್ ಸೆಂಟರ್ ನಡೆಸಲು ಅನುಭವ, ಸೇವಾ ದಕ್ಷತೆ, ಉತ್ತಮ ಗುಣಮಟ್ಟದ ಕಾಗದ ಬಳಕೆ ಮತ್ತು ಶುಚಿತ್ವ ಇವು ಪ್ರಮುಖ ಮಾನದಂಡವಾಗಿರುತ್ತದೆ. ಇದನ್ನು ಕಡ್ಡಾಯವಾಗಿ ಯಶಸ್ವಿ ಬಿಡ್ಡುದಾರನು ಪಾಲಿಸಬೇಕಾಗಿರುತ್ತದೆ.
- ದರಪಟ್ಟಿ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ಹೊಂದಿರುತ್ತದೆ. ಈ ನಿಟ್ಟಿನಲ್ಲಿ ಕಾಲೇಜಿನ ತೀರ್ಮಾನವೇ ಅಂತಿಮವಾಗಿರುತ್ತದೆ.
- ಜೆರಾಕ್ಸ್ ಮತ್ತು ಸೈಬರ್ ಸೆಂಟರ್ ಕಟ್ಟಡದ ಮೇಲ್ವಿಚಾರಣಾ ಸಮಿತಿಯು ನೀಡುವ ನಿರ್ದೇಶನ ಮತ್ತು ಸೂಚನೆಗಳಿಗೆ ಬದ್ಧರಾಗಿರಬೇಕಾಗಿರುತ್ತದೆ.
- **ಅನುಬಂಧ 1**ರಲ್ಲಿನ ದರಗಳಂತೆ ಜೆರಾಕ್ಸ್ ಮತ್ತು ಸೈಬರ್ ಸೆಂಟರ್‌ನ ಸೇವೆಗಳನ್ನು ಒದಗಿಸಲು ಸಿದ್ಧರಿರಬೇಕು.
- ಸೇವಾದಾರರು ಮಾಸಿಕ ಜೆರಾಕ್ಸ್ ಮತ್ತು ಸೈಬರ್ ಸೆಂಟರ್ ಕಟ್ಟಡದಬಾಡಿಗೆಯ ಜೊತೆಗೆ ಪ್ರತ್ಯೇಕ ವಿದ್ಯುತ್ ವೆಚ್ಚದ ಬಿಲ್ಲನ್ನು ಪಾವತಿಸುವುದು.ಯಾವುದೇ ತಿಂಗಳಿನಲ್ಲಿ ಕರಾರುವಕ್ಕಾಗಿ ಬಾಡಿಗೆ ಪಾವತಿಸಲು ವಿಫಲರಾದರೆ, ಜೆರಾಕ್ಸ್ ಮತ್ತು ಸೈಬರ್ ಸೆಂಟರ್ ಮೇಲ್ವಿಚಾರಣೆ ಸಮಿತಿಯಿಂದ ವರದಿ ಪಡೆದು ಜೆರಾಕ್ಸ್ ಮತ್ತು ಸೈಬರ್ ಸೆಂಟರ್ ನಡೆಸಲು ನೀಡಲಾದ ಅನುಮತಿಯನ್ನು ರದ್ದುಗೊಳಿಸಲಾಗುತ್ತದೆ ಮತ್ತು ಇದು ಅಂತಿಮ ತೀರ್ಮಾನವಾಗಿರುತ್ತದೆ.ಈ ಬಗ್ಗೆ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.
- ಜೆರಾಕ್ಸ್ ಮತ್ತು ಸೈಬರ್ ಸೆಂಟರ್ ನಡೆಸುವ ಸ್ಥಳದಲ್ಲಿ ಯಾವುದೇ ತರಹದ ಸ್ಫೋಟಕ ವಸ್ತುಗಳನ್ನಾಗಲಿ, ಬೆಂಕಿ ಅನಾಹುತಕ್ಕೆ ಕಾರಣವಾಗುವಂತಹ ವಸ್ತುಗಳನ್ನಾಗಲಿ ಇಡಬಾರದು.
- ಜೆರಾಕ್ಸ್ ಮತ್ತು ಸೈಬರ್ ಸೆಂಟರ್ ನಡೆಸುವ ಸ್ಥಳದಲ್ಲಿ ಕಡ್ಡಾಯವಾಗಿ ಬೆಂಕಿ ಶಮನ ಮಾಡುವ ವ್ಯವಸ್ಥೆಯನ್ನು ಹೊಂದಿರತಕ್ಕದ್ದು.
- ಜೆರಾಕ್ಸ್ ಮತ್ತು ಸೈಬರ್ ಸೆಂಟರ್ ನಡೆಸುವ ಸಮಯದಲ್ಲಿ ಉಂಟಾಗುವ ಆಕಸ್ಮಿಕ ಅಥವಾ ಅಪಘಾತಗಳಿಗೆ ಪರವಾನಗಿದಾರರೇ ಸಂಪೂರ್ಣ ಹೊಣೆಗಾರರಾಗಿರುತ್ತಾರೆ.
- ಜೆರಾಕ್ಸ್ ಮತ್ತು ಸೈಬರ್ ಸೆಂಟರ್‌ನ ಹೊರತಾಗಿ ಯಾವುದೇ ಅಂಗಡಿ ವಸ್ತುಗಳನ್ನು ಮಾರಾಟಕ್ಕೆ ಇಡಬಾರದು. ಬೀಡಿ, ಸಿಗರೇಟು, ತಂಬಾಕು, ಇತ್ಯಾದಿಗಳ ಮಾರಾಟವನ್ನು ಸಂಪೂರ್ಣವಾಗಿ ನಿಷೇದಿಸಲಾಗಿದೆ.

- ಜೆರಾಕ್ಸ್ ಮತ್ತು ಸೈಬರ್ ಸೆಂಟರ್ ನಡೆಸಲು ಬೇಕಾದ ಹಾಲಿ ಕಟ್ಟಡದಲ್ಲಿರುವ ಸಾಮಗ್ರಿಗಳನ್ನು ಹೊರತುಪಡಿಸಿ ಇತರೆ ಎಲ್ಲಾ ಸಾಮಗ್ರಿಗಳನ್ನು ಜೆರಾಕ್ಸ್ ಮತ್ತು ಸೈಬರ್ ಸೆಂಟರ್ ನಡೆಸುವವರೇ ವ್ಯವಸ್ಥೆ ಮಾಡಿಕೊಳ್ಳಬೇಕು.

- ಜೆರಾಕ್ಸ್ ಮತ್ತು ಸೈಬರ್ ಸೆಂಟರ್ಒಳಾಂಗಣ ಹಾಗೂ ಹೊರಾಂಗಣ ಪ್ರದೇಶಗಳಲ್ಲಿ ಸ್ವಚ್ಛತೆ, ಶಾಂತಿ, ಇವುಗಳನ್ನು ಕಾಪಾಡತಕ್ಕದ್ದು. ತ್ಯಾಜ್ಯ ವಸ್ತುಗಳನ್ನು ವಿಶ್ವವಿದ್ಯಾನಿಲಯದ ಆವರಣದಿಂದ ಮಹಾನಗರ ಪಾಲಿಕೆಯವರು ನಿಗದಿಪಡಿಸಿರುವ ಜಾಗಕ್ಕೆ ಸಾಗಿಸುವ ಜವಾಬ್ದಾರಿಯು ಜೆರಾಕ್ಸ್ ಮತ್ತು ಸೈಬರ್ ಸೆಂಟರ್ ನಡೆಸುವವರದ್ದಾಗಿರುತ್ತದೆ.

- ಜೆರಾಕ್ಸ್ ಮತ್ತು ಸೈಬರ್ ಸೆಂಟರ್‌ನ್ನುಕಾಲೇಜಿನಿಂದ ಅನುಮತಿ ಪಡೆದವರೇ ನಡೆಸಬೇಕೇ ಹೊರತು, ಬೇರೆ ಯಾರಿಗೂ ಬಾಡಿಗೆಗೆ ಅಥವಾ ಗುತ್ತಿಗೆಗೆ ನೀಡಕೂಡದು. ಈ ರೀತಿ ಆದರೆ, ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು.

- ಜೆರಾಕ್ಸ್ ಮತ್ತು ಸೈಬರ್ ಸೆಂಟರ್ ನಡೆಸುವವರಿಗೆ ಅವರ ವಸ್ತುಗಳಿಗೆ ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ಯಾವುದೇ ರೀತಿಯ ಭದ್ರತೆಗೆ ಖಾತರಿ ನೀಡುವುದಿಲ್ಲ. ಇದಕ್ಕೆ ಜೆರಾಕ್ಸ್ ಮತ್ತು ಸೈಬರ್ ಸೆಂಟರ್ ನಡೆಸುವವರು ಸ್ವಂತ ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ.

- ಜೆರಾಕ್ಸ್ ಮತ್ತು ಸೈಬರ್ ಸೆಂಟರ್‌ನ್ನು ಒಂದು ವರ್ಷಗಳ ಕಾಲ ನಡೆಸಲು ದರಪಟ್ಟಿ ಕರೆಯಲಾಗಿದ್ದು, ಕಾರ್ಯಾದೇಶ ನೀಡಲಾದ ದಿನಾಂಕದಿಂದ 12 ತಿಂಗಳ ಅವಧಿಯವರೆಗೆ ಚಾಲ್ತಿಯಲಿರುತ್ತದೆ.

- ಗರಿಷ್ಠ ಮಾಸಿಕ ಬಾಡಿಗೆಯನ್ನು ನಮೂದಿಸುವವರು ಯಶಸ್ವಿ ಬಿಡ್ಡುದಾರರಾಗಿರುತ್ತಾರೆ. ಸದರಿ ಬಿಡ್ಡುದಾರರು ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ತೆಗೆದುಕೊಳ್ಳುವ ತೀರ್ಮಾನಕ್ಕೆ ನಡೆಸುವವರು ಬದ್ಧರಾಗಿರಬೇಕಾಗಿರುತ್ತದೆ.

- ದರಪಟ್ಟಿಯಲ್ಲಿ ಯಶಸ್ವಿಯಾಗಿ ಜೆರಾಕ್ಸ್ ಮತ್ತು ಸೈಬರ್ ಸೆಂಟರ್ ನಡೆಸಲು ಆದೇಶ ಪಡೆದವರು ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಬೇಕಾಗುತ್ತದೆ. ಸದರಿ ಕರಾರಿನಂತೆ ಸಮಯ ಮುಗಿದ ಮೇಲೆ ಸ್ಥಳವನ್ನು ಕಡ್ಡಾಯವಾಗಿ ತೆರವುಗೊಳಿಸುವುದು. ತಪ್ಪಿದ್ದಲ್ಲಿ, ಸ್ಥಳವನ್ನು ಅನಧಿಕೃತವಾಗಿ ಅತಿಕ್ರಮಿಸಲಾಗಿದೆ ಎಂದು ಪರಿಗಣಿಸಿ ಕರ್ನಾಟಕ ಸಾರ್ವಜನಿಕ ಸ್ಥಳಗಳ ಅನಧಿಕೃತ ವಾಸಿಗಳನ್ನು ತೆರವುಗೊಳಿಸುವ ಕಾಯಿದೆ 1974 ರ In accordance with the provisions of Karnataka Public Premises (Eviction of unauthorized occupants) Act 1974 ಪ್ರಕಾರ ತೆರವುಗೊಳಿಸಲಾಗುವ ಹಕ್ಕು ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನದಾಗಿರುತ್ತದೆ.

- ಜೆರಾಕ್ಸ್ ಮತ್ತು ಸೈಬರ್ ಸೆಂಟರ್ ನಡೆಸುವ ಪರವಾನಗಿದಾರರು ತುಮಕೂರು ಮಹಾನಗರ ಪಾಲಿಕೆಯಿಂದ ಅಧಿಕೃತ ಉದ್ದಿಮೆ ಪರವಾನಗಿ ರಹದಾರಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಹೊಂದಿರಬೇಕು ಹಾಗೂ ದೃಡೀಕ್ರತ ಪ್ರತಿಯನ್ನು ಟೆಂಡರ್ ಜೊತೆಯಲ್ಲಿ ಸಲ್ಲಿಸತಕ್ಕದ್ದು. ಇಲ್ಲದಿದ್ದಲಿ ದರಪಟ್ಟಿಯನ್ನು ತಿರಸ್ಕರಿಸಲಾಗುವುದು.

- ಜೆರಾಕ್ಸ್ ಮತ್ತು ಸೈಬರ್ ಸೆಂಟರ್ ನಡೆಸಲು ಇಚ್ಛಿಸುವವರು ಜೆರಾಕ್ಸ್ ಮತ್ತು ಸೈಬರ್ ಸೆಂಟರ್ ನಡೆಸಿರುವುದರ ಬಗ್ಗೆ ಸೇವಾ ಅನುಭವದ ದೃಢೀಕೃತ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು, ಇತ್ತೀಚಿನ ಆದಾಯ ಪ್ರಮಾಣಪತ್ರ, ಜೆರಾಕ್ಸ್ ಮತ್ತು ಸೈಬರ್ ಸೆಂಟರ್ ನಡೆಸುವ ಸಂಬಂಧದ ರಹದಾರಿ ಪತ್ರ, GST No.ಮತ್ತು ಪ್ಯಾನ್ ಕಾರ್ಡ್ ಇವುಗಳನ್ನು ಕಡ್ಡಾಯವಾಗಿ ಹೊಂದಿರಬೇಕು ಹಾಗೂ ದೃಡೀಕ್ರತ ಪ್ರತಿಗಳನ್ನು ಟೆಂಡರ್ ಜೊತೆಯಲ್ಲಿ ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ದರಪಟ್ಟಿಯನ್ನು ತಿರಸ್ಕರಿಸಲಾಗುವುದು.

- ಬಾಡಿಗೆ ಮತ್ತು ವಿದ್ಯುಚ್ಛಕ್ತಿ ವೆಚ್ಚ ಪಾವತಿಸಿದಬಿಲ್ಲುಗಳ ಜೆರಾಕ್ಸ್ ಪ್ರತಿಯನ್ನು ಪ್ರತಿ ತಿಂಗಳು ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ಇವರಿಗೆ ಕಡ್ಡಾಯವಾಗಿ ಸಲ್ಲಿಸುವುದು.

- ಜೆರಾಕ್ಸ್ ಮತ್ತು ಸೈಬರ್ ಸೆಂಟರ್ ನಡೆಸಲು ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನಿಂದ ಅನುಮತಿ ದೊರೆತ ನಂತರ ಜೆರಾಕ್ಸ್ ಮತ್ತು ಸೈಬರ್ ಸೆಂಟರ್ ಪ್ರಾರಂಭಕ್ಕಿಂತ ಮುಂಚಿತವಾಗಿ ರೂ.30,000/-ಗಳ ಡಿ.ಡಿ.ಯನ್ನು The Finance officer, Tumkur University, Tumkur ಇವರ ಹೆಸರಿಗೆ ಸಂದಾಯವಾಗುವಂತೆ ಪಡೆದು ಸಲ್ಲಿಸಬೇಕು.ಬಾಡಿಗೆ ಮತ್ತು ವಿದ್ಯುಚ್ಛಕ್ತಿ ವೆಚ್ಚ ಪಾವತಿಸಲು ವಿಫಲರಾದರೆ ಮುಂಗಡವಾಗಿ ಪಡೆದ ಹಣದಲ್ಲಿ ಜಮಾಮಾಡಿಕೊಳ್ಳಲಾಗುವುದು ಹಾಗೂ ಜೆರಾಕ್ಸ್ ಮತ್ತು ಸೈಬರ್ ಸೆಂಟರ್ ನಡೆಸಲು ನೀಡಲಾದ ಅನುಮತಿಯನ್ನು ರದ್ದುಗೊಳಿಸಲಾಗುವುದು.

S. Srinivasa 18/8

ಪ್ರಾಂಶುಪಾಲರು

ಪ್ರಾಂಶುಪಾಲರು,
ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು
ತುಮಕೂರು-572103.